

# ಭಕ್ತಿಯ ಜತೆ ಪರೋಪಕಾರ

■ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ,
ಪೀಠಾಧಿಪತಿ ಜೈನ ಮಠ

ಶಾಂತಿ ಸಂದೇಶ ಹಾಗೂ ಏಕಶಿಲಾಮೂರ್ತಿಯ ಬೆರಗಿನ ಮೂಲಕ ಇಡೀ ವಿಶ್ವದ ಗಮನ ಸೆಳೆದ ಗೊಮ್ಮಟಗಿರಿಯ ಕೇಂದ್ರಸ್ಥಳವಾದ ಶ್ರವಣಬೆಳಗೊಳದಲ್ಲೀಗ ಅಕ್ಷರಶಃ ಹಬ್ಬದ ವಾತಾವರಣ. 88ನೇ ಮಹಾಮಸ್ತಕಾಭಿಷೇಕದ ಮಹಾಸಾಕ್ಷಾತ್ಕಾರಕ್ಕೆ ಸಾಕ್ಷಿಯಾಗಲಿರುವ ಲಕ್ಷಾಂತರ ಜನರ ದೃಷ್ಟಿ ಈಗ ಜೈನಕಾಶಿಯ ಆ ಪುಣ್ಯ ಕ್ಷಣಗಳತ್ತ ನೆಟ್ಟಿದೆ. ಈ ಭಕ್ತಿ,ಭಾವ ಮಹಾಭಿಷೇಕ ಸಮಾವೇಶದ ರೂವಾರಿ ಜೈನಮಠದ ಪೀಠಾಧಿಪತಿಯಾದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ. ತಮ್ಮ ಹಿತಮಿತ ಭಾಷೆ, ಜೈನಧರ್ಮದ ಬಗೆಗಿನ ಆಳವಾದ ತಿಳಿವಳಿಕೆ, ಜ್ಞಾನವನ್ನು ಪಡೆದಿರುವ ಸ್ವಾಮೀಜಿ ಕಳೆದೊಂದು ವರ್ಷದಿಂದಲೂ ಈ ವೈಭವದ ಸಮಾವೇಶದ ಯಶಸ್ಸಿಗಾಗಿ ಟೊಂಕಕಟ್ಟಿ ನಿಂತಿದ್ದಾರೆ.

ಮಹಾಮಸ್ತಕಾಭಿಷೇಕದ ಈ ಸಂಭ್ರಮದ ಸಂದರ್ಭದಲ್ಲಿ ತಮ್ಮ ಅನ್ನಿಸಿಕೆಗಳನ್ನು ಅವರು ಹಂಚಿಕೊಂಡಿದ್ದಾರೆ.

★ ಮಹಾಮಸ್ತಕಾಭಿಷೇಕದ ಸಿದ್ಧತೆ ಹೇಗಿದೆ?

ಈಗಾಗಲೇ ಧಾರ್ಮಿಕ ಕಾರ್ಯಕ್ರಮಗಳು ಪೂರ್ವಭಾವಿಯಾಗಿ ಆರಂಭಗೊಂಡಿವೆ. 16 ಆಚಾರ್ಯರು, 75 ಮುನಿಗಳು, ಮಾತಾಜಿ ಸೇರಿ 175 ಜನ ಕ್ಷೇತ್ರಕ್ಕೆ ಆಗಮಿಸಿದ್ದು, ಇನ್ನೂ ಅನೇಕರು ಬರುವವರಿದ್ದಾರೆ. ಅವರೆಲ್ಲರೂ ನಡೆದುಕೊಂಡೇ ಕ್ಷೇತ್ರದತ್ತ ಬರುತ್ತಿದ್ದು, ಮಸ್ತಕಾಭಿಷೇಕ ಹೊತ್ತಿಗೆ ಎಲ್ಲರೂ ಕ್ಷೇತ್ರ ಸೇರಿಕೊಳ್ಳಲಿದ್ದಾರೆ. ಹಿಂದಿನ ಮಸ್ತಕಾಭಿಷೇಕಕ್ಕೆ ಹೋಲಿಸಿದರೆ ಈ ಬಾರಿ ಹೆಚ್ಚು ಮುನಿಗಳು ಪಾಲ್ಗೊಳ್ಳುತ್ತಿರುವುದು ವಿಶೇಷ.

★ ಸಿದ್ಧತಾ ಕಾರ್ಯಗಳು ತೃಪ್ತಿ ತಂದಿವೆಯೇ?

ಸಿದ್ಧತೆ ಬಗ್ಗೆ ತೃಪ್ತಿ ಇದೆ. ಮಸ್ತಕಾಭಿಷೇಕಕ್ಕೆ ಅಗತ್ಯ ಸಿದ್ಧತಾ ಕಾರ್ಯ ಮಾಡಿಕೊಳ್ಳಲಾಗಿದೆ. ಮಹಾಮಸ್ತಕಾಭಿಷೇಕ ಮಹೋತ್ಸವ ಸಮಿತಿ, ಜಿಲ್ಲಾಡಳಿತ, ರಾಷ್ಟ್ರಮಟ್ಟದ ಸಮಿತಿ ಸದಸ್ಯರು ಒಗ್ಗಟ್ಟಿನಿಂದ ಹಗಲು–ರಾತ್ರಿ ದುಡಿಯುತ್ತಿದ್ದಾರೆ.

★ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಳ್ಳುವುದು ಯಾವಾಗ?

ಫೆ. 7ರಂದು ಮಹಾಮಸ್ತಕಾಭಿಷೇಕ ಕಾರ್ಯಕ್ರಮ ಉದ್ಘಾಟನೆಯಾಗಲಿದೆ, ಅಭಿಷೇಕ ಕೈಂಕರ್ಯಗಳು ಫೆ.15ರಿಂದ 17ರವರೆಗೆ ವಿವಿಧ ಕಾರ್ಯಕ್ರಮಗಳು ಜರುಗಲಿದ್ದು, ಬೆಟ್ಟದ ಕೆಳಗೆ ಹತ್ತು ದಿನ ಪಂಚಕಲ್ಯಾಣ, ಮೆರವಣಿಗೆ, ಸಾಂಸ್ಕೃತಿಕ, ಧಾರ್ಮಿಕ ಕಾರ್ಯಗಳು ನಡೆಯಲಿವೆ.

16ರಂದು ವಿಂಧ್ಯಗಿರಿ ಸುತ್ತ ಬೃಹತ್ ಮೆರವಣಿಗೆ ಆಯೋಜಿಸಲಾಗಿದೆ. ಫೆ. 17ರಂದು ಮಧ್ಯಾಹ್ನ 2 ರಿಂದ 6 ವರೆಗೆ ಬಾಹುಬಲಿಗೆ ಪ್ರಥಮ ಮಹಾಮಜ್ಜನ ನೆರವೇರಲಿದೆ. 18ರಿಂದ 25ರವರೆಗೆ 1008 ಕಳಶಗಳಿಂದ ಅಭಿಷೇಕ ನಡೆಯಲಿದೆ. ಮಹಾಮಸ್ತಕಾಭೀಷೇಕ ಫೆ. 26ರಂದು ಪೂರ್ಣಗೊಂಡ ನಂತರವೂ